# ಕರ್ನಾಟಕ ಲೋಕಾಯುಕ್ತ

ಕಂಪ್ಲೇಂಟ್/ಉಪಲೋಕ್/ಬಿಜಿಎಂ/1320/2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ,
ಡಾ. ಬಿ.ಆರ್.ಅಂಬೇಡ್ಕರ್ ವೀದಿ, ಬೆಂಗಳೂರು,
ದಿನಾಂಕ: 30/12/2021.

4/1/22

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ ಶಬ್ದಯ್ಯ ಹಿರೇಮಠ, ಗ್ರಾಮಲೆಕ್ಕಾಧಿಕಾರಿ, ಯಲಗೋಡ ಗ್ರಾಮ, ಸಿಂದಗಿ ತಾ: ವಿಜಯಪುರ,** – ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

=====

1. ಪೋಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ದಕ್ಷಿಣ ಕನ್ನಡ, ವಿಜಯಪುರ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ) ಇವರು ಸಲ್ಲಿಸಿದ ತನಿಖಾ ವರದಿ, ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸಲ್ಲಿಸಿದ ವರದಿಯಲ್ಲಿ **ಶ್ರೀ ಶಬ್ದಯ್ಯ ಹಿರೇಮಠ, ಗ್ರಾಮಲೆಕ್ಕಾಧಿಕಾರಿ, ಯಲಗೋಡ ಗ್ರಾಮ, ಸಿಂದಗಿ ತಾ: ವಿಜಯಪುರ,** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ಹುಸೇನಸಾಬ ಬಿನ್ ಲಾಡ್ಲೆಸಾಬ ಸಿಪಾಯಿ, ಹುಣಶ್ಯಾಳ ಗ್ರಾಮ, ಸಿಂದಗಿ ತಾ: ವಿಜಯಪುರ,** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ, ಲಂಚದ ಹಣಕ್ಕೆ ಬೇಡಿಕೆ ಇಟ್ಟು, ಅದನ್ನು ಪಡೆದು ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರವರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಮಾಹಿತಿ :-**

i) ದೂರುದಾರರ ತಂದೆಯ ಹೆಸರಿನಲ್ಲಿ ಯಲಗೋಡ ಗ್ರಾಮದಲ್ಲಿ ಸರ್ವೇ ನಂ: 90/5 ವಿಸ್ತೀರ್ಣ 3 ಎಕರೆ 19 ಗುಂಟೆ ಜಮೀನು ಇದ್ದು, ಆ ಪೈಕಿ ದೂರುದಾರರಿಗೆ ಸದರಿ ಜಮೀನಿನಲ್ಲಿ 37 ಗುಂಟೆ ಹಾಗೂ ತಮ್ಮಂದಿರಾದ ಲಾಲೆಸಾಬ್ ಇವರಿಗೆ 35 ಗುಂಟೆ ಮತ್ತು ಇಸ್ಮಾಯಿಲ್ ರವರಿಗೆ 35 ಗುಂಟೆ ಜಮೀನಿಗೆ ಹಕ್ಕು ಬದಲಾವಣೆ ಮಾಡಿ, ಉತಾರೆ ಕೊಡಲು ದೂರುದಾರರ ತಂದೆ ದಿನಾಂಕ: 10-11-2016 ರಂದು ತಹಸೀಲ್ದಾರ್ ಕಚೇರಿ, ಸಿಂದಗಿ, ಗೆ ಅರ್ಜಿ ಸಲ್ಲಿಸಿರುತ್ತಾರೆ, ದೂರುದಾರರ ತಂದೆ ಅರ್ಜಿ ಸಲ್ಲಿಸಿದ್ದ 15-20 ದಿನಗಳ ನಂತರ ಎದುರುದಾರರಾದ ನಿಮ್ಮನ್ನು ಬೇಟಿ ಮಾಡಿ, ತಮ್ಮ ಅರ್ಜಿಯ ಬಗ್ಗೆ ವಿಚಾರಿಸಿದಾಗ, ಹಕ್ಕು ಬದಲಾವಣೆ ಮಾಡಿ, ಉತಾರೆ ಕೊಡಲು 15 ಸಾವಿರ ರೂ. ಲಂಚದ ಹಣವನ್ನು ಕೇಳಿರುತ್ತೀರಿ. ನಂತರ ದೂರುದಾರರ ತಂದೆ ದೂರುದಾರರಿಗೆ ಸದರಿ

ಜಮೀನುಗಳ ಹಕ್ಕು ಬದಲಾವಣೆ ಕೆಲಸವನ್ನು ನೀವೇ ಮಾಡಿಸಿಕೊಳ್ಳಿ ಎಂದು ಹೇಳಿದ ಮೇರೆಗೆ ದೂರುದಾರರು ಎದುರುದಾರರಾದ ನಿಮ್ಮನ್ನು ಬೇಟಿ ಮಾಡಿ, ವಿಚಾರಿಸಿದಾಗ, ಎದುರುದಾರರಾದ ನೀವು ದೂರುದಾರರ ಪಾಲಿನ ಜಮೀನಿಗೆ 3000/– ರೂ. ಹಾಗೂ ದೂರುದಾರರ ತಮ್ಮಂದಿರ ಜಮೀನಿಗೆ ತಲಾ 3000/– ನಂತೆ ಒಟ್ಟು 9000/– ರೂ. ಲಂಚದ ಹಣವನ್ನು ಕೇಳಿದ್ದು, ಆಗ ದೂರುದಾರರು 8000/– ರೂ. ಗಳನ್ನು ತರುತ್ತೇನೆಂದು ಹೇಳಿದಾಗ, ಎದುರುದಾರರಾದ ನೀವು ಸೋಮವಾರ ತೆಗೆದುಕೊಂಡು ಬಾ ಎಂದು ಹೇಳಿರುತ್ತೀರಿ. ಎದುರುದಾರರಾದ ನೀವು ದೂರುದಾರರಿಂದ ಲಂಚದ ಹಣಕ್ಕೆ ಬೇಡಿಕೆ ಇಟ್ಟ ಬಗ್ಗೆ, ದೂರುದಾರರು ತನ್ನ ಮೊಬೈಲ್ ನಲ್ಲಿ ರೆಕಾರ್ಡ್ ಮಾಡಿಕೊಂಡಿರುತ್ತಾರೆ. ದೂರುದಾರರಿಗೆ ಲಂಚದ ಹಣ ನೀಡಿ ಕೆಲಸ ಮಾಡಿಸಿಕೊಳ್ಳಲು ಇಷ್ಟವಿಲ್ಲದ್ದರಿಂದ, ದಿನಾಂಕ: 23–01–2017 ರಂದು ಪೋಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ವಿಜಯಪುರ, ಇವರಿಗೆ ಎದುರುದಾರರಾದ ನಿಮ್ಮ ವಿರುದ್ಧ ದೂರನ್ನು ನೀಡಿರುತ್ತಾರೆ ಹಾಗೂ ಸಂಭಾಷಣೆ ಇದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಅದರಂತೆ, ಮೊಕದ್ದಮೆ ಸಂಖ್ಯೆ : 01/2017 ಪಿಸಿ ಕಾಯ್ದೆ ಕಲಂ 1988 ಕಲಂ 7ರ ನ್ವಯ ಪ್ರ.ವ. ವರದಿ ದಾಖಲಾಗಿರುತ್ತದೆ.

ii) ದಿನಾಂಕ: 23–01–2017, ತನಿಖಾಧಿಕಾರಿಯವರು ಪಂಚರಾದ ಮೋದಿನಸಾಬ ಪಂಚ–1, ಕಲ್ಲನಗೌಡ ಪಂಚ–2, ಇವರನ್ನು ಬರಮಾಡಿಕೊಂಡು ದೂರುದಾರರನ್ನು ಪರಿಚಯಿಸಿ, ದೂರಿನ ವಿಚಾರವನ್ನು ತಿಳಿಸಿ, ದೂರುದಾರರು ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 8000/– ಗಳನ್ನು ಹಾಗೂ ಸಂಭಾಷಣೆ ದಾಖಲಾಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. ಪಂಚರು ಲಂಚದ ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ–2 ಕಲ್ಲನಗೌಡ ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಪ್ತಿಲೀನ್ ಪೌಡರ್ ಲೇಪಿಸಿದ ಹಣವನ್ನು ಎಣಿಸಿ ದೂರುದಾರರ ಶರ್ಟಿನ ಎದೆಯ ಮೇಲಿನ ಕಿಸೆಯಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ದೂರುದಾರರಿಗೆ ನಿಗದಿತ ಸೂಚನೆಯನ್ನು ಕೊಟ್ಟು ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ತನ್ನ ಕನ್ನಡಕವನ್ನು ತೆಗೆದು ತನ್ನ ಕರವಸ್ತ್ರದಿಂದ ಒರೆಸುವಂತೆ ಸನ್ನೆ ಮಾಡಿ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ಇವರ ಜೊತೆ ನೆರಳು ಸಾಕ್ಷಿ ಪಂಚ–1 ಇವರು ಇದ್ದು, ಘಟನೆಯನ್ನು ಗಮನಿಸಬೇಕೆಂದು ಸೂಚಿಸಿರುತ್ತಾರೆ. ತನಿಖಾಧಿಕಾರಿ ಈ ಸಂಬಂಧವಾಗಿ ಪಂಚರ ಸಮಕ್ಷಮ ಪಂಚನಾಮೆ ಮಾಡಿರುತ್ತಾರೆ.

iii) ಅದೇ ದಿನ ಅಂದರೆ, ದಿನಾಂಕ: 23–01–2017 ರಂದು ದೂರುದಾರರು, ನೆರಳು ಸಾಕ್ಷಿ ಪಂಚ–1 ರವರೊಂದಿಗೆ ಎದುರುದಾರರಾದ ನಿಮ್ಮ ಖಾಸಗಿ ಕಚೇರಿಗೆ ಬಂದು ತಮ್ಮ ಕೆಲಸದ ಬಗ್ಗೆ ವಿಚಾರಿಸಿದಾಗ, ಎದುರುದಾರರಾದ ನೀವು ದೂರುದಾರರನ್ನು ಎಷ್ಟು ಹಣ ತಂದಿದ್ದೀರಿ ಎಂದು ಕೇಳಿದಾಗ, ದೂರುದಾರರು 8000/– ರೂ.ಗಳನ್ನು ತಂದಿದ್ದೀನಿ ಎಂದು ಹೇಳಿದಾಗ, ಎದುರುದಾರರಾದ ನೀವು ದೂರುದಾರರಿಂದ ಫಿನಾಪ್ತಿಲೀನ್ ಪೌಡರ್ ಲೇಪಿತ ಲಂಚದ ಹಣವನ್ನು ನಿಮ್ಮ ಬಲಗೈಯಿಂದ ಪಡೆದು ಎರಡೂ ಕೈಗಳಿಂದ ಎಣಿಸಿ, ನಿಮ್ಮ ಶರ್ಟಿನ ಎದೆಯ ಮೇಲಿನ ಎಡ ಜೇಬಿನಲ್ಲಿ ಇಟ್ಟುಕೊಂಡು ಮೊದಲೇ ಹಣ ಕೊಟ್ಟಿದ್ದರೆ, ಈಗಾಗಲೇ ನಿಮ್ಮ ಕೆಲಸ ಮಾಡಿಕೊಡುತ್ತಿದ್ದೆ

ಎಂದು ಹೇಳಿರುತ್ತೀರಿ. ನಂತರ, ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಾಗ ತನಿಖಾಧಿಕಾರಿ ಸೂಚನೆಯನ್ನು ಅನುಸರಿಸಿ, ದೂರುದಾರರ ಬಳಿ ಬಂದು, ವಿಚಾರಿಸಿ ಮಾಹಿತಿ ಪಡೆದಿರುತ್ತಾರೆ, ಆ ಸಮಯದಲ್ಲಿ ದೂರುದಾರರು ಲಂಚದ ಹಣ ಪಡೆದ ಎದುರುದಾರರನ್ನು ತೋರಿಸಿಕೊಟ್ಟ ಮೇರೆಗೆ, ತನಿಖಾಧಿಕಾರಿ ಎದುರುದಾರರಿಗೆ ತನ್ನನ್ನು ಪರಿಚಯ ಮಾಡಿಕೊಂಡು ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ವಿಚಾರಣೆ ಮಾಡಿರುತ್ತಾರೆ. ನಂತರ, ತನಿಖಾಧಿಕಾರಿಯ ಸೂಚನೆ ಮೇರೆಗೆ, ಪೊಲೀಸ್ ಸಿಬ್ಬಂದಿಯವರು ಎದುರುದಾರರಾದ ನಿಮ್ಮ ಎರಡೂ ಕೈ ಬೆರಳುಗಳನ್ನು ಪ್ರತ್ಯೇಕವಾಗಿ ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ ಸದರಿ ದ್ರಾವಣ ತಿಳಿ ಗುಲಾಬಿ ಬಣ್ಣಕ್ಕೆ ತಿರುಗಿರುತ್ತದೆ ಹಾಗೂ ನಂತರ ತನಿಖಾಧಿಕಾರಿ ಸೂಚನೆ ಮೇರೆಗೆ, ಪಂಚ-1 ರವರು ಎದುರುದಾರರು ಪಡೆದಿದ್ದ ಲಂಚದ ಹಣವನ್ನು ಎಡ ಕಿಸೆಯಲ್ಲಿ ಇಟ್ಟುಕೊಂಡಿದ್ದು, ಸದರಿ ಹಣವನ್ನು ಪಂಚ-1 ರವರು ಪರಿಶೀಲಿಸಿ, ಅವುಗಳ ಮೌಲ್ಯ ಮತ್ತು ನಂಬರುಗಳನ್ನು ವಹಿಸಿ ಕೊಡುವ ಪಂಚನಾಮೆ ಕಾಲಕ್ಕೆ ಇದ್ದ ನೋಟುಗಳಿಗೆ ತಾಳೆ ಮಾಡಿಕೊಂಡು ಖಾತ್ರಿಪಡಿಸಿಕೊಂಡ ನಂತರ, ತನಿಖಾಧಿಕಾರಿ ಸದರಿ ಹಣವನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿ ಎದುರುದಾರರು ಲಂಚದ ಹಣ ಇಟ್ಟುಕೊಂಡಿದ್ದ ಶರ್ಟಿನ ಎಡ ಜೇಬನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಿಂದ ತೊಳೆದಾಗ, ಸದರಿ ದ್ರಾವಣ ಬಿಳಿ ಗುಲಾಬಿ ಬಣ್ಣಕ್ಕೆ ಬಂದಿರುತ್ತದೆ. ಸದರಿ ಶರ್ಟ್‌ನ್ನು ತನಿಖಾಧಿಕಾರಿಯವರು ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ, ತನಿಖಾಧಿಕಾರಿ ಎದುರುದಾರರನ್ನು ಲಂಚದ ಹಣ ಪಡೆದ ಬಗ್ಗೆ ಸಮಜಾಯಿಷಿಕೆಯನ್ನು ಕೊಡುವಂತೆ ಕೇಳಿದಾಗ, ಎದುರುದಾರರು ತನ್ನ ಸಮಜಾಯಿಷಿಕೆಯಲ್ಲಿ **"ನಾನು ಯಲಗೊಡ ಗ್ರಾಮದ ಗ್ರಾಮಲೆಕ್ಕಾಧಿಕಾರಿ ಇದ್ದು, ಹುಣಶ್ಯಾಳ ಗ್ರಾಮದ ಹುಸೇನಸಾಬ ತಂದೆ ಲಾಡೆಸಾಬ ಸಿಪಾಯಿ ಇವರ ಜಮೀನು ಸರ್ವೆ ನಂ: 90/5 ವಾಟ್ನಿ ಮಾಡಿಸುವ ಸಲುವಾಗಿ ಸರ್ಕಾರಿ ಮುದ್ರಾಂಕ ಶುಲ್ಕ ಭರಣ ಮಾಡಿಸಲು ಹಾಗೂ ಪಿತ್ರಾರ್ಜಿತ ಆಸ್ತಿಯು ಇರುವುದರಿಂದ ಮುದ್ರಾಂಕ ಶುಲ್ಕ ಭರಣ ಮಾಡಲು ತಿಳಿಸಿದರು ಸಹ, ನನಗೆ ಕಟ್ಟಲು ಬರುವುದಿಲ್ಲ. ತಾವೆ ಮುದ್ರಾಂಕ ಶುಲ್ಕ ಪಾವತಿಸಿರಿ ಅಂತಾ ಸದರಿಯವರಿಗೆ ಅಕ್ಕ-ತಂಗಿಯವರ ಹೆಸರು ದಾಖಲು ಮಾಡಿ, ಕಡಿಮೆ ಮಾಡಲು ಮುದ್ರಾಂಕ ಶುಲ್ಕ ತುಂಬಲು ಕೊಟ್ಟಿರುತ್ತಾರೆ, ರೂ 1000/- ರೂ ಕೊಟ್ಟಿರುತ್ತಾರೆ"** ಎಂದು ನೀಡಿರುತ್ತಾರೆ. ಸದರಿ ಸಮಜಾಯಿಷಿ ಬಗ್ಗೆ ತನಿಖಾಧಿಕಾರಿಯವರು ದೂರುದಾರರನ್ನು ವಿಚಾರಿಸಿದಾಗ, ಸುಳ್ಳು ಸಮಜಾಯಿಷಿಯನ್ನು ಎದುರುದಾರರು ನೀಡಿರುತ್ತಾರೆಂದು ಹೇಳಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. ಎದುರುದಾರರನ್ನು ಅಂದೇ ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ನಂತರ ತನಿಖಾಧಿಕಾರಿ ದಿನಾಂಕ: 23-01-2017 ರಂದು ಸಂ: 17.40 ರಿಂದ ರಾ: 18.20 ಗಂಟೆಯವರೆಗೆ ಎದುರುದಾರರ ಜಪ್ತಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

iv). ಸಿಡಿಗಳಲ್ಲಿ ದಾಖಲಾದ ಸಂಭಾಷಣೆ, ದೂರುದಾರರ ಹಾಗೂ ಎದುರುದಾರರಾದ ಹಾಗೂ ನಿಮ್ಮ ಧ್ವನಿಗೆ ಮಾದರಿ ಧ್ವನಿಗೆ ಹೋಲಿಕೆ ಆಗುತ್ತದೆ ಎಂಬುದು ವಿಧಿ ವಿಜ್ಞಾನ ಪ್ರಯೋಗಾಲಯದ ವರದಿಯಿಂದ ಕಂಡುಬರುತ್ತದೆ.

v). ರಾಸಾಯನಿಕ ತಜ್ಞರ ಪರೀಕ್ಷಾ ವರದಿಲ್ಲಿ ನಿಮ್ಮಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಪ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

vi). ಎದುರುದಾರರಿಗೆ ದಿ: 09/08/2021 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, ಎದುರುದಾರರು ತಮ್ಮ ವಿವರಣೆಯನ್ನು ದಿ: 01/09/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, ಎದುರುದಾರರು ತನ್ನ ವಿವರಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯಲ್ಲಿರುವ ಆಪಾದನೆಯ ಅಂಶಗಳನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ. ಹಾಗೂ ದೂರಿನ ಅಂಶವನ್ನು ಅಲ್ಲಗಳೆದಿರುತ್ತಾರೆ. ಪ್ರಾಥಮಿಕ ವಿಚಾರಣೆ ನಡೆಸದೆ ಸುಳ್ಳು ಪ್ರಕರಣವನ್ನು ಎದುರುದಾರರ ವಿರುದ್ಧ ದಾಖಲು ಮಾಡಿರುತ್ತಾರೆ. ದೂರುದಾರರು ತನ್ನ ದೂರಿನಲ್ಲಿ ಮಾಡಿರುವ ಆರೋಪವನ್ನು ವಹಿಸುವಿಕೆ ಪಂಚನಾಮೆ ಮತ್ತು ಟ್ರ್ಯಾಪ್ ಪಂಚನಾಮೆಯ ಅಂಶಗಳನ್ನು ಕಾನೂನಿಗೆ ವಿರುದ್ಧವಾಗಿರುತ್ತದೆ ಎಂದು ಹೇಳಿರುತ್ತಾರೆ. ದೂರುದಾರರ ಯಾವುದೇ ಕೆಲಸ ಎದುರುದಾರರ ಹತ್ತಿರ ಬಾಕಿ ಇರುವುದಿಲ್ಲ. ಹಾಗೂ ತನಿಖಾಧಿಕಾರಿಯು ಎದುರುದಾರರಿಗೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ನೀಡಲು ಕಾಲವಕಾಶ ನೀಡಿರುವುದಿಲ್ಲ. ಎದುರುದಾರರ ವಿರುದ್ಧ ಪ್ರಧಾನ ಸತ್ರ ಹಾಗೂ ವಿಶೇಷ ನ್ಯಾಯಾಲಯ, ವಿಜಯಪುರ, ಇಲ್ಲಿ Spl.Case No: 01/2018 ಪ್ರಕರಣ ವಿಚಾರಣೆಗೆ ಬಾಕಿ ಇರುತ್ತದೆ. ಹಾಗೂ ಕ್ರಿಮಿನಲ್ ಪ್ರಕರಣ ಹಾಗೂ ಇಲಾಖಾ ವಿಚಾರಣೆಯಲ್ಲಿರುವ ಆಪಾದನೆ ಅಂಶಗಳು ಒಂದೇ ತೆರನಾಗಿರುತ್ತದೆ. ದೂರುದಾರರಿಂದ ಎದುರುದಾರರು ಯಾವುದೇ ಲಂಚದ ಹಣಕ್ಕೆ ಬೇಡಿಕೆ ಇಟ್ಟಿಲ್ಲ ಹಾಗೂ ಪಡೆದಿಲ್ಲ, ಹಾಗಾಗಿ ಇಲಾಖಾ ವಿಚಾರಣೆಯನ್ನು ಕ್ರಿಮಿನಲ್ ಪ್ರಕರಣ ಮುಕ್ತಾಯ ಆಗುವವರೆಗೂ ಮುಂದುವರೆಸಬಾರದೆಂದು ಕೋರಿರುತ್ತಾರೆ. ಹಾಗಾಗಿ ಎದುರುದಾರರನ್ನು ವಿಚಾರಣೆ ಮಾಡದೇ ಇರಲು ಸೂಕ್ತ ಕಾರಣಗಳು ಕಂಡು ಬಂದಿರುವುದಿಲ್ಲ, ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು ಮೇಲ್ನೋಟಕ್ಕೆ ಕಂಡುಬರುತ್ತದೆ.

3. ಸಾಕ್ಷಿದಾರರ ಹೇಳಿಕೆಗಳು ದೂರು ಅರ್ಜಿ ಹಾಗೂ ತನಿಖಾಧಿಕಾರಿಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳನ್ನು ಪರಿಶೀಲಿಸಿದಾಗ, ಎದುರುದಾರರ ವಿರುದ್ಧ ನಡವಳಿಯನ್ನು ಕೈಬಿಡಲು ಸೂಕ್ತ ಸಮಂಜಸ / ಸಮಾಧಾನಕರ ಕಾರಣ ಇಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

4. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ

ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಆದುದರಿಂದ, ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

4/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು–1
ಕರ್ನಾಟಕ ರಾಜ್ಯ, ಬೆಂಗಳೂರು